ಅಸಲು ದಾವಾ ನಂ. 25/2020
ಪಿ ಡಬ್ಲು-1

ದಿನಾಂಕಃ 01-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ಪ್ರತಿವಾದಿ ನಂ.1 ರಿಂದ 3 ಪರ ಶ್ರೀ. ಪಿ ಆರ್ ಕೆ ವಕೀಲರಿಂದ.**

ವಾದಿ ನಂ.2 ನನ್ನ ಹೆಂಡತಿ ಇರುತ್ತಾರೆ. ನಾನು ವಾದಿ ನಂ.2 ಪರ ಮಾತ್ರ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿ. 1 ನೇ ವಾದಿಯು ನನಗೆ ಸಾಕ್ಷ್ಯ ನುಡಿಯಲು ಮುಕ್ತಿಯಾರ ಪತ್ರ ಕೊಟ್ಟಿಲ್ಲ ಎಂದರೆ ಸರಿ. ನಾನು ವಾರದಲ್ಲಿ 2-3 ಸಲ ಕೋರ್ಟಿಗೆ ಬರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೊರತುಪಡಿಸಿ ಈ ಹಿಂದೆ ಕಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ 4 ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಸದರಿ ಪ್ರಕರಣಗಳು ನನ್ನ ವೈಯಕ್ತಿಕ, ನಮ್ಮ ಕುಟುಂಬದ ಪ್ರಕರಣಗಳು ಇರುತ್ತವೆ. ನಾನು ಕೋರ್ಟಿಗೆ ಅಲೆದಾಟ ಮಾಡುವುದು ಹೊರತುಪಡಿಸಿ ಬೇರೆ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿ ನಂ.1 ಮತ್ತು 2 ಇವರಿಂದ ಒತ್ತಾಯ ಪೂರ್ವಕವಾಗಿ ಪ್ರತಿವಾದಿಯರ ವಿರುದ್ಧ ದಾವೆ ಸಲ್ಲಿಸುವಂತೆ ನೋಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿ ನಂ.2 ಇವರಿಗೆ ದಾವಾ ಆಸ್ತಿಗಳಲ್ಲಿ ಪಾಲು ಇಲ್ಲದೇ ಇದ್ದರೂ, ನಾನು 2 ನೇ ವಾದಿಯ ಒತ್ತಾಯ ಪೂರ್ವಕವಾಗಿ ಅವರಿಂದ ದಾವೆ ಸಲ್ಲಿಸುವಂತೆ ನೋಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಮನೆತನದ ಆಸ್ತಿಗಳನ್ನು ಎತ್ತಿ ಹಾಕುವ ಉದ್ದೇಶದಿಂದ 2 ನೇ ವಾದಿಯ ಮೂಲಕ ದಾವೆ ಸಲ್ಲಿಸಿ ಈಗ ನಾನು ಖೊಟ್ಟಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. 2 ನೇ ವಾದಿಯ ತಂದೆ ನೀಲಪ್ಪ ಇವರಿಗೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನೀಲಪ್ಪನ ಆಸ್ತಿಗಳ ನಂ.24/1, 24/2, 24/3, 509/3 ಸಿ, 508/1, 44/1, 44/5, 44/6 ಇರುತ್ತವೆ. ಸದರಿ ಆಸ್ತಿಗಳ ಬಗ್ಗೆ ಅವು ನೀಲಪ್ಪನ ತಂದೆಯವು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ಆಸ್ತಿಗಳು ನೀಲಪ್ಪನ ಖರೀದಿ ಹಿಡಿದ ಆಸ್ತಿಗಳು ಎಂದರೆ ಸರಿಯಲ್ಲ. ನೀಲಪ್ಪನ ತಂದೆಯವರಿಗೆ ಇಷ್ಟೇ ಎಕರೆ, ಗುಂಟೆ ಜಮೀನು

ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನೀಲಪ್ಪನ ತಂದೆ 1998 ರಲ್ಲಿ ತೀರಿಕೊಂಡಿರುತ್ತಾರೆ. ನೀಲಪ್ಪನ ತಂದೆಯ ಮೂಲ ಮನೆ ಸವಣೂರಿನ ಸುಣಗಾರ ಓಣಿಯಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಮನೆಯನ್ನು ಅವರು ಮಾರಾಟ ಮಾಡಿದ್ದರು ಎಂದರೆ ಸರಿ. ನೀಲಪ್ಪನ ತಂದೆ ಸದರಿ ಮನೆಯನ್ನು ಮಾರಾಟ ಮಾಡಿದ್ದರಿಂದ ನೀಲಪ್ಪ ಸವಣೂರಿನ ಧರ್ಮರಾಜ ನಗರದಲ್ಲಿ ಮನೆ ಮಾಡಿ ಅವರನ್ನು ಅಲ್ಲಿ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ನೀಲಪ್ಪನ ತಂದೆ ಅದೇ ಮನೆಯಲ್ಲಿ ತೀರಿಕೊಂಡರು ಎಂದರೆ ಸರಿಯಲ್ಲ. ಅವರು ತಮ್ಮ ಸಣ್ಣ ಮಗನ ಮನೆಯಲ್ಲಿ ತೀರಿಕೊಂಡರು ಎಂದು ಸಾಕ್ಷಿ ನುಡಿಯುತ್ತಾರೆ. ನೀಲಪ್ಪನ ತಂದೆ ಮಲ್ಲಪ್ಪನಿಗೆ ಒಟ್ಟು 5 ಜನ ಮಕ್ಕಳು ಇದ್ದರು. ಅವರೆಲ್ಲರೂ ಮಲ್ಲಪ್ಪನ ಜೀವಿತ ಅವಧಿಯಲ್ಲಿ ಬೇರೆ ಬೇರೆ ವಾಸವಿದ್ದರು ಎಂದರೆ ಸರಿಯಲ್ಲ. ಮಲ್ಲಪ್ಪನ ಮಕ್ಕಳು ಬೇರೆಯಾಗಿ ವಾಸವಿದ್ದು, ಬೇರೆಯಾಗಿಯೇ ಆಸ್ತಿಗಳನ್ನು ಖರೀದಿ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ದಾವಾದ ಆಸ್ತಿಗಳನ್ನು ಮಲ್ಲಪ್ಪನೇ ಖರೀದಿ ಹಿಡಿದಿರುವುದಾಗಿ ತೋರಿಸಲು ಯಾವುದೇ ಖರೀದಿ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ.

3. ಮಲ್ಲಪ್ಪನ ಮಕ್ಕಳು ಪಾಲು ಮಾಡಿಕೊಂಡ ಬಗ್ಗೆ ನಾನು ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ನೀಲಪ್ಪ 2 ನೇ ಪ್ರತಿವಾದಿಯ ಹೆಸರಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಾಗೇ ದಾನಪತ್ರ ಮಾಡಿಕೊಟ್ಟಿದ್ದರೂ, ಅದರ ಮಾಹಿತಿ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಮಲ್ಲಪ್ಪ ಇವರು 1 ನೇ ವಾದಿ, 2 ನೇ ಪ್ರತಿವಾದಿಯ ಹೆಸರಿಗೆ ಮೃತ್ಯುಪತ್ರ ಮಾಡಿ ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾನಪತ್ರದ ಆಧಾರದ ಮೇಲಿಂದ ಖಾತೆ ಬದಲಾವಣೆ ಮಾಡಿಕೊಳ್ಳುವಾಗ ನಾನು ನನ್ನ ಹೆಂಡತಿಯ ಮೂಲಕ ತಕರಾರು ಸಲ್ಲಿಸಿದ್ದೆ ಎಂದರೆ ಸರಿ. ದಾವಾ ಆಸ್ತಿ ರಿ.ಸ.ನಂ.23/1+2+3/B ಆಸ್ತಿಯನ್ನು ನೀಲಪ್ಪ ಮತ್ತು ಆತನ ಸಹೋದರರು ಕೂಡಿ ಒಟ್ಟಿಗೆ ಖರೀದಿ ಹಿಡಿದಿರುತ್ತಾರೆ ಎಂದರೆ ಸರಿ. ಸಾಕ್ಷಿ ಮಲ್ಲಪ್ಪನ ಜೀವಿತ ಅವಧಿಯಲ್ಲಿ ಒಟ್ಟಾಗಿ ಇದ್ದಾಗ ಖರೀದಿ ಹಿಡಿದಿರುವುದಾಗಿ ನುಡಿಯುತ್ತಾರೆ. ನಂತರದಲ್ಲಿ ಸದರಿ ಆಸ್ತಿಯನ್ನು ಹಂಚಿಕೆ ಮಾಡಿಕೊಂಡಿದ್ದರಿಂದ ನೀಲಪ್ಪ ಇವರಿಗೆ 15

ಗುಂಟೆ 08 ಅಣೆ ಪಾಲು ಬಂದಿರುತ್ತದೆ ಎಂದರೆ ಸರಿ. ಸಾಕ್ಷ್ಯ ಪ್ರಮಾಣ ಪತ್ರ ಬರೆಯಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿ ಅನುಕ್ರಮ ಸಂಖ್ಯೆ - ಐ ಇದು ಮಾತ್ರ ಪಿತ್ರಾರ್ಜಿತ ಆಸ್ತಿ ಇರುವುದಾಗಿ ಮಾಹಿತಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

4. ಮಲ್ಲಪ್ಪ ಇವರದು ಸರ್ವೇ ನಂ.23, ಕ್ಷೇತ್ರ 03 ಎಕರೆ 30 ಗುಂಟೆ ಜಮೀನು ಮಾತ್ರ ಅವರದು ಎಂದರೆ ಸರಿಯಲ್ಲ. ಸದರಿ ಆಸ್ತಿಯು ಮಲ್ಲಪ್ಪ ಇವರ ಖರೀದಿ ಹಿಡಿದಿ ಆಸ್ತಿ ಎಂದರೆ ಸರಿ. ಸರ್ವೇ ನಂ.510, ಕ್ಷೇತ್ರ 02 ಎಕರೆ 28 ಗುಂಟೆ ಜಮೀನು ಮಲ್ಲಪ್ಪರ ಸ್ವಂತ ಜಮೀನು ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಮಲ್ಲಪ್ಪ ಇವರು ತನ್ನ ಕಿರಿಯ ಮಕ್ಕಳಾದ ಗುಡ್ಡಪ್ಪ , ಬಸವಂತಪ್ಪ ಇವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನೀಲಪ್ಪ ಮತ್ತು ಮಲ್ಲಪ್ಪ ಎಂದಿಗೂ ಕೂಡಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ನೀಲಪ್ಪನಿಗೆ ಮಲ್ಲಪ್ಪ ಇವರಿಂದ ಯಾವುದೇ ಆಸ್ತಿ ಬಂದಿಲ್ಲ ಎಂದರೆ ಸರಿಯಲ್ಲ. ಮಲ್ಲಪ್ಪ ಇವರಿಂದ ನೀಲಪ್ಪ ಇವರಿಗೆ ಆಸ್ತಿ ಬಂದ ಕುರಿತು ಯಾವುದೇ ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ನೀಲಪ್ಪ 2 ನೇ ಪ್ರತಿವಾದಿಗೆ ದಾನಪತ್ರ ಮಾಡಿಕೊಡುವಾಗ ನಾನು ಹಾಜರು ಇದ್ದೆ ಎಂದರೆ ಸರಿಯಲ್ಲ. ದಾನಪತ್ರದ ಎಲ್ಲಾ ಸಂಗತಿ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀಲಪ್ಪ ತನ್ನ ಗಂಡು ಮಕ್ಕಳ ಮೂಲಕ ಸ್ವತಃ ದುಡಿದು ಗಳಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನೀಲಪ್ಪನ ಸ್ವಯಾರ್ಜಿತ ಆಸ್ತಿಗಳು ಇದ್ದು, ಅವುಗಳನ್ನು ತನ್ನ ಗಂಡು ಮಕ್ಕಳಿಗೆ ಬಿಟ್ಟು ಕೊಟ್ಟಿದ್ದು ನಾನು ನನ್ನ ಹೆಂಡತಿಯ ಮೂಲಕ ಸುಳ್ಳು ದಾವೆ ಸಲ್ಲಿಸಿ ಈಗ ಸುಳ್ಸು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀಲಪ್ಪನ ಸಹೋದರ ಹೆಗ್ಗಪ್ಪ ಇವರ ಮನೆ ಧರ್ಮರಾಜ ನಗರದಲ್ಲಿ ಇರುತ್ತದೆ. ನೀಲಪ್ಪನ ಇನ್ನೊಬ್ಬ ತಮ್ಮನ ಮನೆ ಹೆಗಪ್ಪ ಇವರ ಮನೆಯ ಪಕ್ಕ ಇರುತ್ತದೆ. ನೀಲಪ್ಪ ಮತ್ತು ಆತನ ಸಹೋದರರು ಕಳೆದ 30 ವರ್ಷಗಳಿಂದ ಬೇರೆ ಬೇರೆಯಾಗಿ ವಾಸ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

ಅಸಲು ದಾವಾ ನಂ. 25/2020
ಪಿ ಡಬ್ಲು-1

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯರ ಪರ ವಕೀಲರು ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).